# ಆಚಾರ್ಯ ಗುರು

ಆಚಾರ್ಯ ಮತ್ತು ಗುರು ಎಂಬ ಮಾತುಗಳು ಬಲು ಹಿಂದಿನಿಂದ ಚಾಲ್ತಿಯಲ್ಲಿವೆ. ಉಪನಿಷತ್ತುಗಳ ಕಾಲದಲ್ಲೇ 'ಆಚಾರ್ಯ' ಎಂಬುದು ಬಳಕೆಯಲ್ಲಿತ್ತು. ಆದರೆ, 'ಗುರು' ಎಂಬುದು ನಂತರ ಬಳಕೆಗೆ ಬಂದಂತೆ ತೋರುತ್ತದೆ. ಕಳೆದ ಎರಡು ಸಹಸ್ರಮಾನಗಳ ಈಚೆಗೆ ಗುರು ಎಂಬುದೇ ಹೆಚ್ಚಾಗಿ ಬಳಕೆಗೆ ಬಂದಿದೆ. ಆಚಾರ್ಯ ಎಂಬುದಕ್ಕೆ ವಿದ್ಯಾಸಂಕುಲದ ಮುಖ್ಯಸ್ಥ ಎಂಬ ಮಾತೇನೂ ಬಳಕೆಯಲ್ಲುಂಟು. ಒಂದೊಂದು ಶಾಸ್ತ್ರಗಳನ್ನು ತಿಳಿದವರಿಗೂ ಆಚಾರ್ಯ ಎಂಬ ಅಭಿಧಾನ ಇರುತ್ತಿತ್ತು. ಅದು ಲೋಕಶಾಸ್ತ್ರಗಳ ವಿಚಾರಕ್ಕೂ ಪರಮಾರ್ಥಶಾಸ್ತ್ರಗಳ ವಿಚಾರಕ್ಕೂ ಅನ್ವಯವಾಗುತ್ತಿತ್ತು. ಉಪನಿಷತ್ತಿನ ಕಾಲದಲ್ಲಿ ಋಷಿಗಳು ಇರುತ್ತಿದ್ದರಷ್ಟೆ. ವಿಶ್ವಾಮಿತ್ರ, ವಸಿಷ್ಠ, ಧೌಮ್ಯ, ಭೃಗು ಹೀಗೆ ಹಲವರು ತಪಸ್ವಿಗಳು ಇರುತ್ತಿದ್ದರು. ಇವರು ಆಶ್ರಮವಾಸಿಗಳು. ಇವರ ಬಳಿಗೆ ತ್ರೈವರ್ಣಿಕರು ಬರುತ್ತಿದ್ದರು. ವಿದ್ಯೆಯ ಉಪಾಸನೆಯನ್ನು ಇವರಲ್ಲಿ ಮಾಡುತ್ತಿದ್ದರು. ಇವರು ಹೆಚ್ಚಾಗಿ ವೇದ–ವೇದಾಂಗಗಳನ್ನೂ ಧರ್ಮಶಾಸ್ತ್ರವನ್ನೂ ಹೇಳುತ್ತಿದ್ದರು. ನೈತಿಕಶಿಕ್ಷಣ ಪೂರಕವಾಗಿ ಬರುತ್ತಿತ್ತು. ಇತಿಹಾಸದ ಪ್ರಾಚೀನ ಕಾಲಘಟ್ಟದಲ್ಲಿ ಸಾಂಖ್ಯ, ಯೋಗ, ನ್ಯಾಯ, ವೈಶೇಷಿಕ, ಪೂರ್ವಮೀಮಾಂಸಾ–ಉತ್ತರಮೀಮಾಂಸಾ – ಎಂಬ ಆರು ದರ್ಶನಗಳನ್ನು, ಆಯಾಯ ದರ್ಶನಗಳನ್ನು ಅರಿತ ಆಚಾರ್ಯರಲ್ಲಿ ಅಂತೇವಾಸಿಗಳು ಅಧ್ಯಯನ ಮಾಡುತ್ತಿದ್ದರು. ಇಂಥ ಆಚಾರ್ಯರು ಸಚ್ಛಿಷ್ಯರನ್ನು ಪಡೆದು ಅವರಿಗೆ ಅಸನ–ವಸನಗಳನ್ನು ನೀಡುತ್ತಿದ್ದರು. ಇದಕ್ಕೆ ಊರಿನ ಮುಖಂಡರು, ಶ್ರೀಮಂತರು, ನೆರವಾಗುತ್ತಿದ್ದರು. ಪ್ರಾಚೀನಭಾರತ ಮತ್ತು ಪ್ರಾಚೀನ ಕರ್ನಾಟಕದ 'ಅಗ್ರಹಾರ'ಗಳಲ್ಲಿ ಇಂಥ ಆಚಾರ್ಯರು ಇರುತ್ತಿದ್ದರು. ಶಾಸ್ತ್ರಾರ್ಥಗಳನ್ನು ವಿವರಿಸಿ ತಾನೂ ಶಾಸ್ತ್ರಕ್ಕೆ ಅನುಗುಣವಾಗಿ ನಡೆದುಕೊಂಡು ಜನರಿಗೆ ಮಾರ್ಗದರ್ಶಿಯಾದವನನ್ನು ಆಚಾರ್ಯನೆಂದೇ ಕರೆಯುತ್ತಿದ್ದರು. ನಾವು ಇಂಥವರನ್ನು ಆಧುನಿಕಕಾಲಕ್ಕೆ ಹೆಸರಿಸಬಹುದಾದರೆ; ನ್ಯಾಯಶಾಸ್ತ್ರಕ್ಕೆ ಕುಣಿಗಲ್ಲು ರಾಮಶಾಸ್ತ್ರೀ, ಮೀಮಾಂಸಾಶಾಸ್ತ್ರಕ್ಕೆ ವೈದ್ಯನಾಥಶಾಸ್ತ್ರೀ, ವೇದಾಂತಕ್ಕೆ ಹಾನಗಲ್ಲು ವಿರೂಪಾಕ್ಷಶಾಸ್ತ್ರೀ, ವ್ಯಾಕರಣಕ್ಕೆ ಅಂಬಳೆ ರಾಮಕೃಷ್ಣಶಾಸ್ತ್ರೀ ಮುಂತಾದವರು ಪ್ರಥಿತರಾದ ಆಚಾರ್ಯರಾಗಿದ್ದರು.

ಇನ್ನು ಗುರು ಎಂಬ ಮಾತನ್ನು ಈಗ ಗಮನಿಸೋಣ. 'ಗುರು' ಎಂಬುದಕ್ಕೆ ಕತ್ತಲೆಯಿಂದ ಬೆಳಕಿನ ಕಡೆಗೆ ಕರೆದೊಯ್ಯುವವನು ಎಂಬ ಅರ್ಥ ಜನಪ್ರಿಯವಾಗಿ ಬಳಕೆಯಲ್ಲಿತ್ತು. ಇದು ಮಾತ್ರವಲ್ಲ, 'ದೊಡ್ಡವರು' ಎಂಬ ಅರ್ಥ ಬಳಕೆಯಲ್ಲಿತ್ತು. ಗುರುಗ್ರಹವನ್ನು ಒಮ್ಮೆ ನೆನಪು ಮಾಡಿಕೊಳ್ಳಬಹುದು. 'ಗುರುತ್ವ' ಎಂಬ ಮಾತು ಗಮನೀಯ. ಭಾರತದಲ್ಲಿ ಭಕ್ತಿಸಂಪ್ರದಾಯ ಕಾಣಿಸಿಕೊಂಡಾಗ 'ಗುರು' ಎಂಬ ಮಾತು ಹೆಚ್ಚಾಗಿ ಬಳಕೆಗೆ ಬಂದಿತು. ರಾಜಾಶ್ರಯದಲ್ಲಿದ್ದವರು 'ಕುಲಗುರು' ಎಂದು ಕರೆಸಿಕೊಂಡರು. ಗುರು–ಶಿಷ್ಯ ಪರಂಪರೆ ಬೆಳೆಯಿತು. ಮಠಗಳಲ್ಲಿ ಇರುವವರು 'ಗುರುಗಳು' ಎಂದು ಕರೆಸಿಕೊಳ್ಳುತ್ತಿದ್ದರು. ಇದು ಮುಂದೆ 'ಜಗದ್ಗುರು' ಎಂಬ ಬಳಕೆಗೆ ಕಾರಣವಾಯಿತು. ನೀವೊಮ್ಮೆ 'ಗುರುಸ್ತುತಿ'ಯನ್ನು ನೆನಪಿಸಿಕೊಳ್ಳಿ. ಅಲ್ಲಿ ಬರುವ 'ಗುರುಬ್ರಹ್ಮ, ಗುರುವಿಷ್ಣು, ಗುರುದೇವೋ ಮಹೇಶ್ವರಃ, ಗುರುಸ್ಸಾಕ್ಷಾತ್ ಪರಂಬ್ರಹ್ಮ, ತಸ್ಮೈ ಶ್ರೀ ಗುರವೇ ನಮಃ' ಎಂದು ಪ್ರಾರಂಭವಾಗುವ 'ಗುರುಸ್ತುತಿ'ಯನ್ನು ತಿಳಿಯದೇ ಇರುವವರು ನಮ್ಮಲಿಲ್ಲ. ವಿದ್ಯೆಗಳಲ್ಲಿ ಪರಾವಿದ್ಯೆಯೂ ಉಂಟು; ಅಪರಾವಿದ್ಯೆಯೂ ಉಂಟು. ಈ ಎರಡೂ ವಿದ್ಯೆಗಳನ್ನು ಹೇಳಿಕೊಡುವವರನ್ನು 'ಗುರು' ಎಂಬ ಸಂಜ್ಞೆಯಲ್ಲೇ ಲೋಕದ ಜನ ಕರೆಯುತ್ತಿದ್ದರು. ಕುವೆಂಪು ತಮ್ಮ ಕವಿತೆ–ಕಾವ್ಯಗಳಲ್ಲಿ 'ಗುರುಕೃಪೆ', 'ಲೋಕಗುರು' ಎಂಬ ಮಾತುಗಳನ್ನು ವಿಶೇಷಾರ್ಥದಲ್ಲಿಯೇ ಬಳಸಿದ್ದಾರೆ. ಶಿಷ್ಯನನ್ನು ಕೈಹಿಡಿದು ಕರೆದೊಯ್ಯುವ ಪ್ರತಿಮಾರೂಪ ಅಲ್ಲುಂಟು. ಬೇಂದ್ರೆಯವರು ಉತ್ತರಕರ್ನಾಟಕದ ದತ್ತಸಂಪ್ರದಾಯವನ್ನು ಮೈಗೂಡಿಸಿಕೊಂಡವರು. ಮಹಾರಾಷ್ಟ್ರದ ಸಂತಪರಂಪರೆಯನ್ನು ತಳಮಟ್ಟ ಕಂಡವರು. ಗುರುದೀಕ್ಷೆ–ಮಂತ್ರದೀಕ್ಷೆ ಪಡೆದವರೆಂಬುದನ್ನು ನಾವು ಗಮನಿಸಬೇಕು.

ಸಂಸ್ಕೃತದಲ್ಲಿ 'ಗುರು' ಎಂಬ ಮಾತಿಗೆ ಹಲವಾರು ಅರ್ಥಗಳಿವೆ. ದೇವತೆಗಳ ಗುರುವಾದ ಬೃಹಸ್ಪತಿಯನ್ನು ಗುರುವೆಂದು ಸಂಬೋಧಿಸುವುದುಂಟು. ಇಷ್ಟು ಮಾತ್ರವಲ್ಲ – ತಂದೆ, ಉಪಾಧ್ಯಾಯ, ಜ್ಯೇಷ್ಠ ಸಹೋದರ, ಪೂಜ್ಯ, ಆತ್ಮವಿದ್ಯೋಪದೇಶಕ, ಸಂಪ್ರದಾಯ ಪ್ರವರ್ತಕ, ಪುರೋಹಿತ, ಪರಮಾತ್ಮ, ಪುಷ್ಯನಕ್ಷತ್ರ, ಕಠಿಣವಾದ, ಪ್ರಸಿದ್ಧನಾದ, ಎಂಬ ನಾನಾ ಅರ್ಥಗಳಿವೆ. ಆದರೆ, ಕನ್ನಡ ಸಂಸ್ಕೃತಿಯು ಬಹುತೇಕವಾಗಿ ಆತ್ಮವಿದ್ಯೋಪದೇಶಕ, ಸಂಪ್ರದಾಯ ಪ್ರವರ್ತಕ ಎಂಬ ಹಿನ್ನೆಲೆಯಲ್ಲಿ ಹೆಚ್ಚಾಗಿ ಗ್ರಹಿಸಿದೆ. ಜೈನಪರಂಪರೆಯಲ್ಲಿ ಪಂಚಪರಮೇಷ್ಠಿಗಳನ್ನು ಹೇಳುವಾಗ 'ಉಪಾಧ್ಯಾಯ' ಎಂದು ಬಳಕೆಯಾಗಿದೆ. ಕನ್ನಡ ಜೈನಪರಂಪರೆಯಲ್ಲಿ 'ಗುರು' ಎಂಬ ಮಾತು ಬಳಕೆಯಾಗಿದೆ. ವೀರಶೈವ ಸಂಪ್ರದಾಯದಲ್ಲಿ 'ಗುರುಕರುಣತ್ರಿವಿಧಿ' ಎಂಬುದುಂಟು. ಸಾಧಕ ಶಿಷ್ಯರ ಅಧಿಕಾರಭೇದದಿಂದ 'ಗುರು' ಎಂಟು ಬಗೆಯವರೆಂದು ವೀರಶೈವ ಸಾಹಿತ್ಯವು ಗುರುತಿಸುತ್ತದೆ. ಇವರಲ್ಲಿ ಶಾಸ್ತ್ರದ ಶಬ್ದಾರ್ಥಗಳನ್ನು ಬೋಧಿಸುವವನನ್ನು ಬೋಧಕಗುರು ಎಂದೂ ತತ್ತ್ವದರ್ಶಕನನ್ನು ವೇದಕಗುರುವೆಂದು ಕರೆಯುತ್ತಾರೆ. ವಶ್ಯ, ಆಕರ್ಷಣೆಗಳಿಂದ ಇಹದಲ್ಲಿ ಸುಖ, ಪರಲೋಕದಲ್ಲಿ ದುಃಖ ಪಡೆಯುವಂತೆ ಮಾಡುವವನು ನಿಷಿದ್ಧಗುರು. ಪುಣ್ಯ ಮತ್ತು ಕರ್ಮದ ಉಪದೇಶದಿಂದ ಇಹ–ಪರ ಎರಡರಲ್ಲಿಯೂ ಸುಖವನ್ನು ಪಡೆಯುವಂತೆ ಮಾಡುವವನು ಕಾಮ್ಯಗುರು. ವಿವೇಕದಿಂದ ಶಮದಮಾದಿ ಷಡ್ಗುಣಪ್ರದನೇ ಸೂಚಕಗುರು. ಇನ್ನು ವಿಷಯಗಳನ್ನು ಮಿಥ್ಯೆಯೆಂದು ತಿಳಿಸಿ ಆತ್ಮನಲ್ಲಿ ಪ್ರೀತಿ ಹುಟ್ಟಿಸುವಾತ ವಾಚಕಗುರು. ಶಿವಜೀವರ ಐಕ್ಯದ ಜ್ಞಾನವನ್ನು ಪ್ರದಾನ ಮಾಡುವಾತನು ಕಾರಕಗುರು. ಸಾಧಕನಿಗೆ ಉಂಟಾಗುವ ಸಂಶಯಗಳನ್ನು ಹೋಗಲಾಡಿಸಿ ನಿತ್ಯಮುಕ್ತಿಯನ್ನು ಕೊಡುವವನು ವಿಹಿತಗುರು.

ಈ ಹಿನ್ನೆಲೆಯಲ್ಲಿ ಗುರುನೀಡುತ್ತಾನೆ; ಶಿಷ್ಯ ಪಡೆಯುತ್ತಾನೆ. ಇಲ್ಲಿರುವ ಎಂಟು ಬಗೆಯ ಗುರುಗಳು ಕನ್ನಡ ಸಂತರ ಪರಮಾರ್ಥ ಪಥಕ್ಕೆ ಸೇರಿದವರು. ಕನ್ನಡಸಂಸ್ಕೃತಿಯ ಗುರುವನ್ನು ಆಶ್ರಯಿಸಿದೆ. ದಾಸರು 'ಗುರುವಿನ ಗುಲಾಮನಾಗದ ತನಕ ದೊರೆಯದಣ್ಣ ಮುಕುತಿ' ಎಂದಿದ್ದಾರೆ. ಅಜ್ಞಾನವನ್ನು ನಿವಾರಣೆ ಮಾಡಿ ಸುಜ್ಞಾನವನ್ನು ನಮ್ಮಲ್ಲಿ ಕೂರಿಸುವವನೇ ಗುರು! ಅಂಥ 'ಗುರುತತ್ವ'ಕ್ಕೆ ನಾವು ಮಣಿಯಬೇಕು!

■ ಪುರಂಜೀವಿ

## ಮಾತೇ ಮುತ್ತು

- ಅನ್ಯರನ್ನು ಆಳು ಮಾಡದೆ, ತನ್ನ ತಾನಾಳಿದರೆ ಅದೇ ಬಿಡುಗಡೆ.

  –ದ.ರಾ. ಬೇಂದ್ರೆ

- ಒಂದುವೇಳೆ ನೀವು ಯಾರಿಗಾದರೂ ಸಹಾಯ ಮಾಡುತ್ತಿದ್ದರೆ ಮತ್ತು ಅವರಿಂದ ಮರಳಿ ಏನನ್ನಾದರೂ ಬಯಸುತ್ತಿದ್ದರೆ; ನೀವು ಅವರೊಂದಿಗೆ ವ್ಯಾಪಾರ ಮಾಡುತ್ತಿದ್ದೀರಿ, ಅವರಿಗೆ ಕರುಣೆ ತೋರಿಸುತ್ತಿಲ್ಲ ಎಂದರ್ಥ.

  –ಡಾ. ಎ.ಪಿ.ಜೆ. ಅಬ್ದುಲ್ ಕಲಾಂ

- ನಿನ್ನಂತೆ ನೀನಾಗು, ನಿನ್ನನ್ನು ನೀ ಅರಿ ಮೊದಲು, ಚೆನ್ನೆಂದು ಅವರಿವರನ್ನು ಅನುಸರಿಸಬೇಡ.

  –ಬೀಚಿ

- ಈ ಜಗತ್ತೆನ್ನುವುದು ನಮ್ಮನ್ನು ನಾವು ಗಟ್ಟಿಗೊಳಿಸಲೆಂದೇ ಇರುವ ವ್ಯಾಯಾಮ ಶಾಲೆ.

  –ಸ್ವಾಮಿ ವಿವೇಕಾನಂದ

- ಅರ್ಥವಿಲ್ಲದ ಪ್ರಶ್ನೆಗೆ ಸುಮ್ಮನಿರುವುದೇ ಉತ್ತರ.

  –ಕುವೆಂಪು

- ಬಾಳುವಷ್ಟು ಕಾಲ ಕಲಿಯುತ್ತಲೇ ಇರಬೇಕು.

  –ತೀ.ನಂ.ಶ್ರೀ.

- ಜಲವೆಂದರೆ ಕೇವಲ ನೀರಲ್ಲ, ಅದು ಪಾವನ ತೀರ್ಥ.

  –ಕೆ.ಎಸ್. ನಿಸಾರ್ ಅಹಮ್ಮದ್